**ಓ.ಎಸ್. ನಂಬರಃ 44/2023**

**ಪಿ. ಡಬ್ಲ್ಯೂಃ 1**

(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 06-03-2025)

**ಪಾಟೀ ಸವಾಲು : 1 ನೇ ಪ್ರತಿವಾದಿ ಪರ ಶ್ರೀ ಯು ಹೆಚ್ ಎನ್ ವಕೀಲರಿಂದ,**

ದಾವಾ ಆಸ್ತಿಯು ನನ್ನ ಮತ್ತು ಪ್ರತಿವಾದಿಗಳ ಕುಟುಂಬದ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯು ಸಾಮಾಯಿಕ ಇದ್ದು ನಮ್ಮ ನಡುವೆ ಪಾಲು ಆಗಿರುವುದಿಲ್ಲ. ನನಗೆ ದಾವಾ ಆಸ್ತಿಯಲ್ಲಿ ಎಷ್ಟು ಹಕ್ಕು ಇದೆಯೋ ಅಷ್ಟೇ ಹಕ್ಕು 1 ನೇ ಪ್ರತಿವಾದಿಗೂ ಇರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಪಾಲು ಕೊಡಲು ನನ್ನದೇನು ತಕರಾರು ಇಲ್ಲ. 3 ನೇ ಪ್ರತಿವಾದಿಯವರು ನನ್ನ ಅಕ್ಕ 2 ನೇ ಪ್ರತಿವಾದಿ ಮತ್ತು ನನ್ನ ತಾಯಿಗೆ ಮೋಸ ಮಾಡಿ ದಾವಾ ಆಸ್ತಿಗೆ



ಸಂಬಂಧಿಸಿದಂತೆ ದಿನಾಂಕ 13.02.2017 ರಂದು ಹಕ್ಕು ಬಿಡುಗಡೆ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದ್ರಿ ದಾಖಲೆಯ ಬಗ್ಗೆ ನನಗೆ ಗೊತ್ತಿರಲಿಲ್ಲ. ಈ ಬಗ್ಗೆ ನನ್ನ ತಾಯಿ ನನಗೆ ಹೇಳಿರುವುದಿಲ್ಲ. 2 ನೇ ಪ್ರತಿವಾದಿ ಅಂಗವಿಕಲರಾಗಿರುತ್ತಾರೆ. ಹಕ್ಕು ಬಿಡುಗಡೆ ಪತ್ರದ ಬಗ್ಗೆ 2 ನೇ ಪ್ರತಿವಾದಿಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಸದ್ರಿ ಹಕ್ಕು ಬಿಡುಗಡೆ ಪತ್ರವು ನನ್ನ ಮತ್ತು 1 ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿರುವ ಹಕ್ಕಿಗೆ ಯಾವುದೇ ಬಾಧಕ ಆಗುವುದಿಲ್ಲ ಎಂದರೆ ಸರಿ. ಸದ್ರಿ ಹಕ್ಕು ಬಿಡುಗಡೆ ಪತ್ರಕ್ಕೆ 3 ನೇ ಪ್ರತಿವಾದಿಯವರು ತನಗೆ ಬೇಕಾದ ಸಂಬಂಧಿಕರನ್ನು ಸಾಕ್ಷಿದಾರರಾಗಿ ಮಾಡಿರುತ್ತಾರೆ ಎಂದರೆ ಸರಿ.

**ಈ ಹಂತದಲ್ಲಿ 2 ಮತ್ತು 3 ನೇ ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**